## ಪ್ರಧಾನ ಸಿವಿಲ್ ನ್ಯಾಯಾಧೀಶರು ಮತ್ತು ಜೆ.ಎಂ.ಎಫ್.ಸಿ., ರವರ ನ್ಯಾಯಾಲಯ, ಚಳ್ಳಕೆರೆ.

**ಸಿ.ಸಿ. ನಂ.** 59/2024

ಪ್ರಮಾಣ ವಚನ ಬೋಧಿಸಲಾಯಿತು.

| | | | |
|---|---|---|---|
| ಹೆಸರು | : | ಶಿವರಾಜ್ ಜೆ., | ಸಿ.ಡಬ್ಲ್ಯೂ – 1 |
| ತಂದೆ ಹೆಸರು | : | ಗೋವಿಂದರೆಡ್ಡಿ | ಪಿ.ಡಬ್ಲ್ಯೂ – 1 |
| ವಯಸ್ಸು | : | 32 ವರ್ಷ | |
| ಉದ್ಯೋಗ | : | ಪಿ ಎಸ್ ಐ | |
| ವಾಸಸ್ಥಳ | : | ಚಳ್ಳಕೆರೆ | ದಿಃ 20–08–2025. |

## ಮುಖ್ಯ ವಿಚಾರಣೆ: ಮಾನ್ಯ ಎ.ಪಿ.ಪಿ. ರವರಿಂದಃ

ದಿನಾಂಕ 18.06.2023 ರಿಂದ ಇಲ್ಲಿಯವವರೆಗೆ ನಾನು ಚಳ್ಳಕೆರೆ ಪೊಲೀಸ್ ಠಾಣೆಯಲ್ಲಿ ಪಿ ಎಸ್ ಐ . ಅಂತ ಕರ್ತವ್ಯ ನಿರ್ವಹಿಸಿರುತ್ತೇನೆ.

ದಿನಾಂಕ 19.01.2024 ರಂದು ನಾನು ಚಾಸಾ4 ಮತುತ 5 ರವರೊಂದಿಗೆ ಬೆಳಗಿನ ಜಾವ 03–00 ಗಂಟೆ ಸಮಯದಲ್ಲಿ ನಗರದಲ್ಲಿ ಗಸ್ತು ಕರ್ತವ್ಯದಲ್ಲಿದ್ದಾಗ ತ್ಯಾಗರಾಜ ನಗರದ ರವೀಂದ್ರ ಕಾಲೇಜು ರಸ್ತೆಯಲ್ಲಿ ಸಮವಸ್ತ್ರದಲ್ಲಿದ್ದ ನಮ್ಮನ್ನು ನೋಡಿ ಯಾರೋ ಇಬ್ಬರು ಆಸಾಮಿಗಳನು ಮರೆಮಾಚಿಕೊಂಡಿದ್ದನ್ನು ಗಮನಿಸಿ ನಮ್ಮನ್ನು ಕಂಡು ಓಡಿ ಹೋಗುತ್ತಿದ್ದಾಗ ಠಾಣಾ ಸಿಬ್ಬಂದಿಯವರಿಂದ ಹಿಡಿದುಕೊಂಡು , ಸ್ಥಳ ಕ್ಕೆ ಪಂಚರಾದ ಚಾಸಾ2 ಮತ್ತು 3 ರವರನ್ನು ಬರ ಮಾಡಿಕೊಂಡಿರುತ್ತೇವೆ. ಪಂಚರ ಸಮಕ್ಷಮ ಆಸಾಮಿಗಳ ಹೆಸರು ವಿಳಾಸ ಕೇಳಲಾಗಿ ಅಂಜಿ ಬಿನ್ ಅಂಜಿನಪ್ಪ , ನಾಗರಾಜ ಯಾನೆ ನಾಗ ಬಿನ್ ಹನುಮಂತಪ್ಪ ಎಂದು ತಿಳಿಸಿರುತ್ತಾರೆ. ಆರೋಪಿತರನ್ನು ಪ್ರಶ್ನಿಸಲಾಗಿ ಸಮಂಜಸವಾದ ಉತ್ತರವನ್ನುನೀಡದ ಕಾರಣ ಬೆಳಗಿನ ಜಾವ 03–30 ರಿಂದ 04–30 ರವರೆಗೆ ಪಂಚನಾಮೆ ಕ್ರಮ ಜರುಗಿಸಿ ವಶಕ್ಕೆ ಪಡೆದಿರುತ್ತೇನೆ.

ಬೆಳಗಿನ ಜಾವ 04–45 ಗಂಟೆಗೆ ಠಾಣೆಗೆ ಹಾಜರಾಗಿ ಠಾಣಾ ಮೊಕದ್ದಮೆ ಸಂಖ್ಯೆ 30/2024 ದಾಖಲಿಸಿಕೊಂಡು ಪ್ರ.ವ. ವರದಿಯನ್ನು ಮಾನ್ಯ ಘನ ನ್ಯಾಯಾಲಯಕ್ಕೆ ನಿವೇದಿಸಿಕೊಂಡಿರುತ್ತೇನೆ. ನಂತರ ಆರೋಪಿತರನ್ನು ವಿಚಾರಣೆ ಮಾಡಿ ಬೆಳಗಿನ ಜಾವ 06–30 ಗಂಟೆಗೆ ದಸ್ತಗಿರಿ ಕ್ರಮ ಜರುಗಿಸಿ ರಿಮ್ಯಾಂಡ್ ಅರ್ಜಿಯೊಂದಿಗೆ ನ್ಯಾಯಾಲಯದ ಮುಂದೆ ಹಾಜರು ಪಡಿಸಿರುತ್ತೇನೆ.

ದಿನಾಂಕ 20.01.2024 ರಂದು ಚಾಸಾ-4 ಮತ್ತು 5 ರವರ ಹೇಳಿಕೆಯನ್ನು ಪಡೆದುಕೊಂಡಿರುತ್ತೇನೆ. ನಂತರ ಅಂತಿಮ ವರದಿಯನ್ನು ತಯಾರಿಸಿ ನ್ಯಾಯಾಲಯಕ್ಕೆ ನಿವೇಸಿಕೊಂಡಿರುತ್ತೇನೆ.

ಸಾಕ್ಷಿಗೆ ಸ್ಥಳ ಪಂಚನಾಮೆಯನ್ನು ತೋರಿಸಲಾಗಿ ಅದರಲ್ಲಿರುವ ತನ್ನ ಸಹಿಯನ್ನು ನೋಡಿ ಗುರುತಿಸಿರುತ್ತಾರೆ. ಸ್ಥಳ ಪಂಚನಾಮೆಯನ್ನು ನಿಪಿಃ1 ಅಂತ, ಸಾಕ್ಷಿಯ ಸಹಿಯನ್ನು ನಿಪಿಃ 1(ಎ) ಅಂತ ಗುರುತಿಸಲಾಯಿತು.

ಸಾಕ್ಷಿಗೆ ನಿವೇದನೆಯನ್ನು ತೋರಿಸಲಾಗಿ ಅದರಲ್ಲಿರುವ ತನ್ನ ಸಹಿಯನ್ನು ನೋಡಿ ಗುರುತಿಸಿರುತ್ತಾರೆ. ನಿವೇದನೆಯನ್ನು ನಿಪಿಃ2 ಅಂತ, ಸಾಕ್ಷಿಯ ಸಹಿಯನ್ನು ನಿಪಿಃ 2(ಎ) ಅಂತ ಗುರುತಿಸಲಾಯಿತು.

ಸಾಕ್ಷಿಗೆ ಪ್ರ.ವ.ವರದಿಯನ್ನು ತೋರಿಸಲಾಗಿ ಅದರಲ್ಲಿರುವ ತನ್ನ ಸಹಿಯನ್ನು ನೋಡಿ ಗುರುತಿಸಿರುತ್ತಾರೆ. ಪ್ರ.ವ.ವರದಿಯನ್ನು ನಿಪಿಃ3 ಅಂತ, ಸಾಕ್ಷಿಯ ಸಹಿಯನ್ನು ನಿಪಿಃ 3(ಎ) ಅಂತ ಗುರುತಿಸಲಾಯಿತು.

ಸಾಕ್ಷಿಯು ನ್ಯಾಯಾಲಯದ ಮುಂದಿರುವ ಆರೋಪಿತರನ್ನು ನೋಡಿ ಗುರುತಿಸಿರುತ್ತಾರೆ.

**<u>ಪಾಟೀ ಸವಾಲುಃ ಶ್ರೀ ಎಂ.ಪಿ.ವಿ., ಆರೋಪಿ ಪರ ವಕೀಲರಿಂದಃ</u>**

ಗಸ್ತು ಕರ್ತವ್ಯದಲ್ಲಿದ್ದ ಬಗ್ಗೆ ಠಾಣಾ ಡೈರಿಯಲ್ಲಿ ವಿಶೇಷ ಗಸ್ತಿನ ನಮೂದಿಸುವುದಿಲ್ಲ. ವಿಶೇಷ ಗಸ್ತಿನ ಬಗ್ಗೆ ದಾಖಲೆಯನ್ನು ಸಲ್ಲಿಸಿರುವುದಿಲ್ಲ ಎಂದರೆ ಸರಿ. ಕೃತ್ಯ ನಡೆದ ದಿನದಂದು ಯಾವ ಸ್ಥಳ ದಲ್ಲಿ ಗಸ್ತಿನಲ್ಲಿದ್ದೆ ಎಂದು ಹೇಳಲು ಆಗುವುದಿಲ್ಲ. ಘಟನಾ ಸ್ಥಳಕ್ಕೆ 03-00 ಗಂಟೆಗೆ ಹೋಗಿರುತ್ತೇನೆ. ಆರೋಪಿತರನ್ನು ಮೊದಲು ಯಾರು ನೋಡಿರುತ್ತೇವೆ ಎಂದು ನಿಪಿ.2 ರಲ್ಲಿ ನಮೂದಿಸಿರುವುದಿಲ್ಲ. ಆರೋಪಿತರು ಮರೆ ಮಾಚಿಕೊಳ್ಳಲು ನಮ್ಮಿಂದ ಹಿಂದೆ ಸರಿದಿರುತ್ತಾರೆ. ಆರೋಪಿತರು ಯಾವುದೇ ಬಟ್ಟೆಯಿಂದ ಮರೆ ಮಾಚಿಕೊಂಡ ಬಗ್ಗೆ ನಮೂದಿಸಿರುವುದಿಲ್ಲ ಎಂದರೆ ಸರಿ. ಆರೋಪಿತರು ಮರೆ ಮಾಚಿ ನಿಂತಿದ್ದ ಸ್ಥಳ ದಲ್ಲಿ ಕತ್ತಲು ಇತ್ತು. ಆರೋಪಿ ತರು ಕತ್ತಲೆ ಯಲಿಲ ಇದ್ದುದ್ದರಿಂದ ಅವರನ್ನು ನಿಖರವಾಗಿ ಗುರುತಿಸಲು ಆಗುವುದಿಲ್ಲ ಎಂದರೆ ಸರಿ. ಸಾಕ್ಷಿಯು ಮುಂದುವರಿದು ಅವರನ್ನು ಹಿಡಿದುಕೊಂಡು ವಿಚಾರಣೆ ಮಾಡಿದಾಗ ಅವರನ್ನು ಗುರುತಿಸಲು ಸಾಧ್ಯವಾಗಿರುತ್ತದೆ ಎಂದು ನುಡಿಯುತ್ತಾರೆ. ಸಮಾನ್ಯವಾಗಿ ಗಸ್ತು ಕರ್ತವ್ಯದಲ್ಲಿದ್ದಾಗ ಸಮವಸ್ತ್ರವನ್ನು ಧರಿಸುವುದಿಲ್ಲ ಎಂದರೆ ಸರಿಯಲ್ಲ.

ಮೊದಲಿಗೆ ಯಾವ ಆರೋಪಿಯನ್ನು ಹಿಡಿದುಕೊಳ್ಳಲಾಗಿತ್ತು ಎಂದು ಹೇಳಲು ಆಗುವುದಿಲ್ಲ. ಆರೋಪಿತರು ಯಾವ ಬಣ್ಣದ ಬಟ್ಟೆಯನ್ನು ಧರಿಸಿದ್ದರು ಎಂದು ಹೇಳಲು ನೆನಪಿಲ್ಲ. ಪಂಚರನ್ನು ನಮ್ಮ ಸಿಬ್ಬಂದಿಗಳ ಸಹಾಯದಿಂದ ಬೆಳಿಗ್ಗೆ 03-20 ಗಂಟೆಗೆ ಕರೆಸಲಾಗಿರುತ್ತದೆ. ಪಂಚರು ಘಟನಾ ಸ್ಥಳದ ಹತ್ತಿರ ವಾಸ ಇರುವುದಿಲ್ಲ ಎಂದರೆ ಸಾಕ್ಷಿಯು ಕೃತ್ಯ ನಡೆದ ಸ್ಥಳ ದ ಹತ್ತಿರ ವಿದದ ಸರ್ಕಲ್ ನಿಂದ ಸದರಿಯವರನ್ನು ಕರೆ ತರಲಾಗಿರುತ್ತದೆ ಎಂದು ನುಡಿಯುತ್ತಾರೆ. ಚಾಸಾ-3 ರವರು ತೋಡ್ಲಾರಹಟ್ಟಿ ಗ್ರಾಮದ ನಿವಾಸಿ ಎಂದರೆ ಸರಿ. ತೋಡ್ಲಾರಹಟ್ಟಿ ಗ್ರಾಮಕ್ಕೂ ಮತ್ತು ಚಳ್ಳಕೆರೆ ಎಷ್ಟು ಅಂತರದಲ್ಲಿದೆ ಎಂದರೆ ಸಾಕ್ಷಿಯು ಚಾಸಾ-3 ವರು ಆಟೋ ಚಾಲಕನಾಗಿದ್ದು, ರಾತ್ರಿ ಪಾಳೆಯ ಕರ್ತವ್ಯದಲ್ಲಿದ್ದ ಎಂದು ನುಡಿಯುತ್ತಾರೆ . ಪಂಚರನ್ನು ನಮ್ಮ ಸಿಬ್ಬಂದಿಗಳಲ್ಲಿ ಯಾರು ಕರೆ ತಂದಿರುತ್ತಾರೆ ಎಂದು ನನಗೆಹೇಳಲು ಆಗುವುದಿಲ್ಲ. ಪಂಚರಿಗೆ ನೋಟೀಸ್ ಜಾರಿ ಮಾಡಿಲ್ಲ ಎಂದರೆ ಸರಿ. ಘಟನಾ ಸ್ಥಳ ಕ್ಕೆ ಚಾಸಾ-2 ಮತ್ತು 3 ರವರು ಬಂದಿರಲಿಲ್ಲ ಎಂದರೆ ಸರಿಯಲ್ಲ. ಆರೋಪಿತರ ಹೆಸರು ಮತ್ತು ವಿಚಾಸವನ್ನು ತಿಳಿದುಕೊಂಡಿರುವುದಿಲ್ಲ ಎಂದರೆ ಸರಿಯಲ್ಲ. ಆರೋಪಿ ತರು ಬೆಂಗಳೂರಿಗೆ ಕೂಲಿ ಕೆಲಸಕ್ಕೆ ಹೋಗಿದ್ದು , ಪುನಃ ಗ್ರಾಮಕ್ಕೆ ಹೋಗಲು ಬಸ್ ನಿಲ್ದಾಣದಲ್ಲಿ ನಿಂತಿದ್ದಾಗ ಅಂಕಿ ಅಂಶಗಳಿಗಾಗಿ ಅವರ ವಿರುದ್ಧ ಸುಳ್ಳು ಪ್ರಕರಣವನ್ನು ದಾಖಲಿಸಿರುತ್ತೇನೆ ಎಂದರೆ ಸರಿಯಲ್ಲ. ಆರೋಪಿ ಯು ಯಾವುದೇ ತಪ್ಪು ಮಾಡದೇ ಇದ್ದರೂ ಸಾಕ್ಷಿದಾರರಿಂದ ಸುಳ್ಳು ಹೇಳಿಕೆ ಪಡೆದು ಸುಳ್ಳು ದೋಷಾರೋಪಣ ಪಟ್ಟಿ ಸಲ್ಲಿಸಿರುತ್ತೇನೆ ಎಂದರೆ ಸರಿಯಲ್ಲ. ನಿಪಿ.1 ರ ರೀತ್ಯ ನಾನು ಮಹಜರ್ ಕ್ರಮ ಜರುಗಿಸಿಲ್ಲ ಎಂದರೆ ಸರಿಯಲ್ಲ.

**ಮರು ವಿಚಾರಣೆಃ ಇಲ್ಲ.**

(ತೆರೆದ ನ್ಯಾಯಾಲಯದಲ್ಲಿ ನನ್ನ ಉಕ್ತಲೇಖನದಂತೆ ಬೆರಳಚ್ಚು ಮಾಡಲಾಯಿತು.)

ಓ.ಹೇ.ಕೇ.ಸರಿಯಿದೆ,

ಪ್ರಧಾನ ಸಿವಿಲ್ ಮತ್ತು ಜೆ.ಎಂ.ಎಫ್.ಸಿ.,
ನ್ಯಾಯಾಧೀಶರು, ಚಳ್ಳಕೆರೆ